ಅಲ್ಲಿ ಕುಳಿತು ಅಡ್ಡ ಜ್ಞಾನದಲ್ಲಿ ಕೊಳಕ್ಕೆ ಕಲ್ಲು ಹರಳು ಬಿಸಾಕುತ್ತ ಎಲ್ಲೋ ಮನ ಅಡ್ಡಾಡಿಸುತ್ತಿದ್ದ ಪ್ರಸಾದನನ್ನು ಶಿವಣ್ಣ ಬಂದಾಗ ನೋಡಿದ. ಅವನಿಗೆ ಆಶ್ಚರ್ಯವಾಯಿತೇನೊ.

'ಏನು ಪ್ರಸಾದಪ್ಪಾ ಇಲ್ಲಿ...!'

ಶಿಥಿಲವಾಗಿ ಹಣ್ಣು ಹಣ್ಣು ಮುದುಕನ ಹಲ್ಲುಗಳಂತಾಗಿದ್ದ ಮೆಟ್ಟಿಲುಗಳ ಮೇಲೇ ಕುಳಿತಿದ್ದ ಪ್ರಸಾದ ಸುತ್ತಲು ರಾಶಿ ರಾಶಿಯಾಗಿ ಬಿದ್ದ ಹಳೇ ತರಗೆಲೆಗಳನ್ನು ನೋಡುತ್ತ ಸುಮ್ಮನೇ ಇದ್ದ. ಈ ಬೆಳಕಿನ ವೇಳೆಯಲ್ಲೂ ಹುಚ್ಚು ಕಾಡಿನಂತೆ ಬೆಳೆದ ಹಳೇ ಬಲಿತ ಮರಗಳು ಕತ್ತಲು ಬಳಿದಿದ್ದವು. ಆ ಕತ್ತಲನ್ನೂ ಅವನ ಕಣ್ಣು ತುಂಬಿಕೊಂಡಿತು. ತೋಟದ ಆಚೆ ಹಿಂದೆ ಇದ್ದ ಹೊಲಗಳೆಲ್ಲಾ ಸೈಟುಗಳಾಗಿ ಹೊಸ ಹೊಸ ಮನೆಗಳು ಎದ್ದಿದ್ದವು. ಪಾಳು ಬಿದ್ದ ತೋಟವೂ ಸಹ ಮುಂದೆ ಬಡಾವಣೆ ಆಗಬಹುದೇನೊ... ಆದರೆ ಸದ್ಯಕ್ಕೆ ಈ ತೋಟದಲ್ಲಿ ಶಿವಣ್ಣನಿಗೆ ಅವನಿಗೆ ವೈದ್ಯಕ್ಕೆ ಬೇಕಾದ ಹಲವಾರು ಜಾತಿ ವನಸ್ಪತಿಗಳು ದೊರಕುತ್ತಿದ್ದವು' ಅದಕ್ಕವನು ತೋಟಕ್ಕೆ ಬೇಕಾದ್ದನ್ನು ಕಿತ್ತುಕೊಂಡು ಹೋಗಲು ಬರುತ್ತಿದ್ದ. ಈ ಕೊಳದ ಸುತ್ತಾ ಅವನು ಅರಸುತ್ತಿದ್ದ ಗಂಟಲ ಬೇನೆ ಸಸ್ಯ ಬೆಳೆದುಕೊಂಡಿತ್ತು. ಶಿವಣ್ಣ ಪ್ರಸಾದನನ್ನು ಕಂಡರೂ, ಪ್ರಸಾದ ಅವನನ್ನು ಗಮನಿಸಲಿಲ್ಲ.

'ಪ್ರಸಾದಪ್ಪಾ...' ಎಂದು ಮತ್ತೆ ಕರೆದ ಶಿವಣ್ಣ.

ಪ್ರಸಾದ ನಿದ್ದೆಯಿಂದ ಬೆಚ್ಚಿ ಎದ್ದವನಂತೆ 'ಆಂ...?' ಎಂದ. ನಂತರ ಮನಸ್ಸನ್ನು ಒದರಿಕೊಂಡು ಎಚ್ಚೆತ್ತುಕೊಂಡು, ಜಾಣತನವಾಗಿ ಶಿವಣ್ಣನಿಗೇ ಪ್ರಶ್ನೆ ಎಸೆದ.

'ಶಿವಣ್ಣಾ... ಔಷಧಿ ಸೊಪ್ಪು ಆರಿಸಿಕೊಳ್ಳಲು ಬಂದೆ ಏನು?...'

'ಹೂಂನ್ರೀ... ಆ ಗಂಗೀ ಪೋರಿಗೆ ಗಂಟಲು ಕೀವು ಸೈತ ಊದಿಕೊಂಡು ಜ್ವರ ಕುದಿಲಿಕ್ ಹತ್ತಿತ್ತು. ನನ್ನ ಹುಡುಕ್ಕೊಂಡು ಬಂದು ತೋರ್ಸದ್ಳು. ಅದಕ್ಕೇ ಔಷಧಿ ಎಲಿ ತಡಕ್ಕೊಂಡು ಬಂದಿವ್ನಿಯಪ್ಪಾ...'

'ಗಂಗಾಳ ಮಗೂಗೆ ಹುಶಾರಿಲ್ವಾ...?' ಪ್ರಸಾದ ಜಗ್ಗನೆ ಬೆಚ್ಚಿದಂತಾದ್ದನ್ನು ಗಮನಿಸಿದ ಶಿವಣ್ಣನಿಗೆ ಏಕೋ ವಿಚಿತ್ರ ಅನ್ನಿಸಿತು.

ಕೆಲಸದಾಕೆ ಕೂಸಿಗೆ ಜ್ವರ ಬಂದ್ರೆ ಇವನ್ಯಾಕೆ ಗಾಬರಿ ಆದ?

ಶಿವಣ್ಣ ಅಲ್ಲಿದ್ದ ಸೊಪ್ಪು ಕಿತ್ತು ಪರೀಕ್ಷಿಸುತ್ತಾ ಅದರ ಬಗ್ಗೆ ಮಾತ್ರ ಮಾತಾಡುವಂತೆ ಹೇಳಿದ, 'ಈ ಕಳೇನೇ ಔಷಧಿ ಆಗಿದೆ ನೋಡಿದ್ರಾ?' ಅವನಿಗೆ ಬೇಕಾದ ಎಲೆಗಳೇ ಸಿಕ್ಕಿದ್ದರಿಂದ ಒಂದಷ್ಟು ಕಿತ್ತುಕೊಂಡು ತನ್ನ ಚೀಲಕ್ಕೆ ಹಾಕಿಕೊಂಡ. ಆ ಕೂಸಿಗೆ ಮೂರು ಜಿನ ಬರೀ ಹೊಟ್ಟೇಲಿ ಒಂದೊಂದೇ ಎಲಿ ತಿನ್ಸಿದ್ರೂ ಸಾಕಾಗ್ತೈತಿ... ಇನ್ನೂ ಇಡೀ ಜನ್ಮ ಗಂಟಲ ಬ್ಯಾನಿ ಬರೊ ಹಂಗೇ ಇಲ್ಲ... ಯಾವ ಆಪ್ಲೇಶನ್ನೂ ಬ್ಯಾಡಾ...!'

ಪ್ರಸಾದ 'ಹೌದೇನು...? ನೀವು ಹೇಳೋದು ನಾನೂ ನಂಬ್ಲೇ ಬೇಕು' ಪ್ರಸಾದನಿಗೆ ಇದೇ ಕೊಳಕ್ಕೆ ತಾಯಿ ಜೊತೆಗೆ ಬರುತ್ತಿದ್ದಾಗ ಆದ ಒಂದು ಘಟನೆ ನೆನಪಿಗೆ ಬಂದಿತ್ತು. ಅವನಿಗೂ ಮಗುವಾಗಿದ್ದಾಗ ಗಂಗೆಯ ಕೂಸಿನಂತೆ ಇದೇ 'ಸೆಪ್ಟಿಕ್ ಟಾನ್ಸಿಲ್ಸ್' ಗಂಟಲಿಗಾಗಿತ್ತು. ಗಂಟಲ ಎರಡೂ ಗಡ್ಡೆ ಕೀವು ಸಹಿತ ಬಾತುಕೊಂಡು ಕುಡಿದ ನೀರೂ ಸಹ ಇಳಿಯದೆ, ಕೆಂಡಾಮಂಡಲ ಜ್ವರ ಬಂದಿತ್ತು. ಆಗ ಅವರ ಪಕ್ಕದ ಮನೆಯಲ್ಲಿದ್ದ ಅದ್ಯಾರೊ ಒಬ್ಬರು ಕೈಗೆ ರಸ ಬಳಿದುಕೊಂಡು ಆ ಹುಡುಗನ ಗಂಟಲಿಗೇ ಕೈಹಾಕಿ ಉಗುರಿನಿಂದ ಗಂಟಲ ಗೆಡ್ಡೆ ಹುಣ್ಣು ಕಿತ್ತುಬಿಟ್ಟರು. ಆ ಕಾಲದ ರಾಕ್ಷಸ ವೈದ್ಯ! ಆದರೆ ವಿಚಿತ್ರವೆಂಬಂತೆ ಆ ನಂತರ ಅವನಿಗೆ ಗಂಟಲನೋವು ಬರಲೇ ಇಲ್ಲ. ಅವನೆಂದ,

'ಶಿವಣ್ಣ, ನನಗೂ ಚಿಕ್ಕೋನಿದ್ದಾಗ ಇಂತದ್ದೇ ಗಂಟಲ ವ್ರಣವಾಗಿತ್ತು. ಕೀವು ಗಡ್ಡೆ ಉಗುರಿನಿಂದ ಕಿತ್ತು ಹಾಕಿಬಿಟ್ರು...!' ಎಂದು ನಕ್ಕ.

'ಹಂಗೇನ್ರಿ...? ಹಂಗೆಲ್ಲಾ ಮಾಡಬಾರ್ದು...! ಉಗುರಿನ ನಂಜು ಆಗ್ತೈತಿ... ನಿಮ್ಮ ಆಯಸ್ಸು ಗಟ್ಟಿ ಇತ್ತು ನೋಡ್ರೀ... ಬದುಕುಳಿದ್ರಿ...' ಎನ್ನುತ್ತಾ ತನ್ನ ಜೋಳಿಗೆ ಸರಿ ಮಾಡಿಕೊಂಡು ಮತ್ತೆ ಹೇಳಿದ, 'ನೀವು ಇನ್ನೂ ಇಲ್ಲೇ ಇರ್ತೀರೇನ್ರಿ!? ಇಲ್ಲ... ನನ್ನ ಜತೀಗೆ ಬರ್ತಿರೇನ್ರಿ...? ದೇವಸ್ಥಾನದಲ್ಲಿ ನೀವೆಲ್ಲಿ ಹೋದ್ರಿ ಅಂತ ಗಲಿಬಿಲಿ ಹಚ್ತಾರೊ ಯಾನೊ...?'

ಪ್ರಸಾದ ಮತ್ತೊಂದು ಸಣ್ಣ ಕಲ್ಲ ನೀರಿಗೆ ಬೀಸಿ ಹಾರಿಸಿದ. ನೀರಿನ ಹಸಿರ ಪಾಚಿ ಕದಲಿಕೊಂಡಿತು. ಅದನ್ನೇ ನೋಡುತ್ತ ಪ್ರಸಾದ ನಕ್ಕು ಹೇಳಿದ,

'ಶಿವಣ್ಣ... ದೇವಸ್ಥಾನ ಜೈಲು ಅಂದ್ಕೊಂಡಿದೀಯೇನಪ್ಪಾ...? ಇಲ್ಲಿ ಬಂದು ಸ್ವಲ್ಪ ಶಾಂತಿ ಪಡೆಯೋಣ ಅಂತ ಬಂದೆ...'

'ನೀವು ಟೈಂ ಅಂದ್ರೆ ಟೈಂ... ಇದು ದೇವಸ್ಥಾನದ ಟೈಂ ಅಲ್ವಾ ಪ್ರಸಾದಪ್ಪ... ಅದಕ್ಕೇ ಹಂಗಂದೆ...'

'ನೀನು ಹೇಳಿದ್ದು ತಪ್ಪಿಲ್ಲ... ಆದ್ರೆ ನನ್ನ ಮನಸ್ಸು ಶಾಂತಿ ಬಯಸ್ತು ಅಷ್ಟೇ...'

'ಯಾಕ್ರೀ.... ನಿಮಗೇನಾಗಿದೆ...? ನಾ ಕೊಡೋ ದವಾನೂ ಈಗ ತಗೋತಿಲ್ಲ... ಹೀಂಗ ಒಬ್ರೇ ಬಂದು ಇಲ್ಲಿ ಕುಂತಿದ್ದೀರಿ... ನೀವು ಯಾಕೆ ಹಿಂಗಾ ಮಾಡ್ಲಿಕ್ಕೆ ಹತ್ತಿದ್ದೀರಿ.....?'

ಪ್ರಸಾದ ಒಳಗೊಳಗೆ ತನ್ನಲ್ಲೇ ಹೇಳಿಕೊಂಡ, 'ನಾನೇ ಮಾಡಿರುವ ತಪ್ಪು ನಾನೇ ಜೀರ್ಣಿಸಿಕೊಳ್ಳಲಾರದೆ ಇದ್ದೀನಿ. ಅನಾರೋಗ್ಯದ ಮನಸ್ಸು ಇರುವ ನಾನು ದೇವರ ಸೇವೆ, ವಿದ್ವತ್ ಪ್ರದರ್ಶನ, ಜನರಲ್ಲಿ ಒಳ್ಳೆತನ ತೋರೋದು, ಸಂಸ್ಕಾರ–ಸಂಸ್ಕೃತಿ ಇಂಥಹ ಸುಳ್ಳು ಸತ್ಯ ತೋರಿ ಮೋಸ ಮಾಡುತ್ತಿದ್ದೇನೆ!... ಆತ್ಮಸಾಕ್ಷಿಯ ಬಾಗಿಲನ್ನು ಭದ್ರವಾಗಿ ಮುಚ್ಚಿಬಿಟ್ಟಿದ್ದೇನೆ. ಈ ಕೊಳಕು ಮನಸಿನ ಕೈಯಿಂದ ಬಾಗಿಲ ಚಿಲಕ ತೆರೆಯಲಾಗುತ್ತಿಲ್ಲ. ನನ್ನನ್ನು ನಾನೇ ಪರಚಿಕೊಳ್ಳುತ್ತಿದ್ದೇನೆ. ಇದನ್ನೆಲ್ಲಾ ಬಾಯಿ ತೆರೆದು ಹೇಳಿಬಿಡುವ ಧೈರ್ಯ ಅವನಿಗಿರಲಿಲ್ಲ. ಮುಂದಿನ ದಶಕಗಳಲ್ಲಿ ಬರುವಂತಹ ದಿಟ್ಟತನ ಅಂದಿನ ಜನರಿಗೆ ಇರಲಿಲ್ಲ. ಭವಿಷ್ಯದಲ್ಲಿ ಎಲ್ಲಾ ಸಲೀಸು. ಅವನಂತಹ ಪುರೋಹಿತ ವರ್ಗದವನು ತನಗಿಂತ ಕೀಳು ಜಾತಿ ಹೆಣ್ಣನ್ನು ಪ್ರೀತಿಸಿದರೆ ಧೈರ್ಯವಾಗಿ ಉಚ್ಛ ಸಮಾಜವನ್ನು ಎದುರಿಸಿ ಮದುವೆ ಆಗಿ ಆತ್ಮ ವಂಚನೆ ಕಳೆದುಕೊಂಡು ಸುಖಿಯಾಗುವ ಸಾಧ್ಯತೆ ಈಗ ಇರಲಿಲ್ಲ. ಎರಡು ದಿನ ಜನ ಗುಸು ಗುಸು ಮಾಡಿ ನಂತರ ಎಲ್ಲ ಮರೆತು, ಅವನನ್ನು ಸಮಾಜದೊಳಗೆ ಸೇರಿಸಿಕೊಳ್ಳುವ ಕಾಲ ಈಚಿನದ್ದು.

ಒಂದು ವಾರದ ನಂತರ ಪ್ರಸಾದನಿಗೆ ಗಂಗೆಯ ಪಾಪುವಿನ ಆರೋಗ್ಯ ಹೇಗಿದೆ ಎಂದು ತಿಳಿದುಕೊಳ್ಳುವ ಕುತೂಹಲ. ಅವಳು ದೇವಸ್ಥಾನಕ್ಕೆ ಬರುತ್ತಿರಲಿಲ್ಲವಾದ್ದರಿಂದ ಅವಳನ್ನು ಕೇಳುವ ಅವಕಾಶ ಇರಲಿಲ್ಲ. ಶಿವಣ್ಣ ಹನುಮಂತನ ಭಕ್ತನಾಗಿ ಶನಿವಾರಗಳಲ್ಲಿ ದೇವಸ್ಥಾನಕ್ಕೆ ತಪ್ಪದೇ ಬರುತ್ತಿದ್ದ. ಮಿಕ್ಕ ದಿನ ಬರುತ್ತಿರಲಿಲ್ಲ. ಪ್ರಸಾದನೂ ಈಗೀಗ ಔಷಧಿಗಾಗಿ ಅವನ ಬಳಿ ಹೋಗುತ್ತಿರಲಿಲ್ಲ ಶಿವಣ್ಣನನ್ನು ಕೇಳಲೂ ಆಗಲಿಲ್ಲ. ·

ಆ ಮಧ್ಯಾಹ್ನ ದೇವಸ್ಥಾನದ ಬಾಗಿಲು ಮುಚ್ಚಿದ ಮೇಲೆ ಪ್ರಸಾದ ಊಟದ ಶಾಸ್ತ್ರ ಮುಗಿಸಿ, ಶಿವಣ್ಣನ ಮನೆ ಕಡೆ ನಡೆದ. ಅವನ ಮನೆಗೆ ಹೋಗಬೇಕಾದರೆ, ಗಂಗೆ ವಾಸ ಮಾಡುತ್ತಿದ್ದ ಅರಸು ಬಂಗಲೆ ದಾಟಿಯೇ ಹೋಗಬೇಕಿತ್ತು. ಪ್ರಸಾದ ಶಿವಣ್ಣನ ಮನೆಗೆ ಹೋಗುತ್ತಿದ್ದಾಗ ಬಳಿಯ ಬಸ್‌ಸ್ಟಾಪಿನಲ್ಲಿ ಶಿವಣ್ಣನೇ ಬಸ್ಸಿಂದ ಇಳಿಯುತ್ತಿದ್ದ. ಅವನೇ ಪ್ರಸಾದನನ್ನು ಮೊದಲು ನೋಡಿ, ಕೂಗಿಕೊಂಡ,

'ಓ, ಪ್ರಸಾದಪ್ನೋರು!... ಇತ್ತ ಹೊಂಟ್ರಿ ಎತ್ತ...?'

'ನಿಮ್ಮ ಮನೆ ಕಡೆಗೇ ಹೊರಟಿದ್ನಪ್ಪಾ... ನಿನ್ನ ನೋಡಿ ಬಹಳ ದಿನ ಆಯ್ತಲ್ಲಾ. ನೀ ಎಲ್ಲಿಂದ ಬರ್ತಿದ್ದಿ...?'

'ಗ್ರಂಥಿಗೆ ಅಂಗ್ಡಿಯಿಂದ ಔಷಧ ತರ್ಲಿಕ್ಕೆ ಹೋಗಿ ಬಂದ್ನಪ್ಪಾ.'

'ಏನೋ, ರೋಗಿಗಳು ಹೆಚ್ಚಾಗಿ ಬಿಟ್ಟ ಹಾಗೆ ಇದ್ಯಲ್ಲಾ... ಸಂಪಾದ್ನೆ ಜೋರೆ...?' ಎಂದು ಛೇಡಿಸಿದ.

'ಹೂಂನ್ರೀ... ಕಾಯಿಲೆ ಬೀಳಾವ್ರು ಜಾಸ್ತಿ ಆಗಿ ಪುರುಸೊತ್ತು ಸಿಗ್ತಿಲ್ರೀ... ಬರ್ರೀ... ಮನಿಗೆ ಹೋಗಾಣ... ಕೂತು ಮಾತಾಡೋಣ.'

'ನಿನ್ನ ಊಟ ಇನ್ನೂ ಆಗಿರ್ಲ್ಲಾರ್ದು...? ಈಗ ಬರ್ತಿದ್ದೀಯಲ್ಲಾ... ಇನ್ನೊಮ್ಮೆ ಬರ್ತೀನಪ್ಪಾ...' ಎಂದ ಸಂಕೋಚದಲ್ಲಿ.

'ಹತ್ತೂವರೆಗೇ ಹೊಟ್ಟೆ ತುಂಬಸ್ಕಂಡು ಹೋಗಿದ್ದಿ... ನಡೀರಿ, ಹೇಗಾನ ಇಬ್ಬರೂ ಮಾತಾಡುತ್ತ ನಡೆದರು. ಹಾದಿಯ ಉದ್ದ ಪ್ರಸಾದನಿಗೆ ತನ್ನ ಬಾಲ್ಯ ಕಾಲದ ಹಳೇ ಮೈಸೂರು ನೆನಪಿಗೆ ಬರುತ್ತಿತ್ತು. ಶಿವಣ್ಣನಿಗೆ ಅದನೇ ವಿವರಿಸ ತೊಡಗಿದ.

'ಇದು ನೋಡಪ್ಪಾ... ಇಲ್ಲಿ, ಕೆಂಪರಾಜೇ ಅರಸ್ರು ಅನ್ನೋರು ಆ ಕಾಲದಲ್ಲಿ... ನಾನು ಹುಡುಗನಾಗಿದ್ದಾಗ ಒಂದು 'ಡೈರಿ' ಇಟ್ಟಿದ್ರು. ಹಾಲಿಗಾಗಿ ಒಳ್ಳೆ ಜಸ್ರಿ ಜಾತಿ ಹಸುಗಳ್ನ ಸಾಕಿದ್ರು... ನಾವು ಸ್ಕೂಲಲ್ಲಿ ಊಟಕ್ಕೆ ಬಿಟ್ರೆ ಇಲ್ಲಿಗೆ ಓಡೋಡಿ ಬಂದ್ಬಿಡ್ತಿದ್ವಿ... ಯಾಕೆ ಗೊತ್ತೆ...? ಆ ಕಾಲದಲ್ಲಿ 'ಐಸ್' ಎಲ್ಲೂ ಸಿಗ್ತಿರ್ಲಿಲ್ಲ... ಈಗಿನ ಹಾಗೆ ಫ್ರಿಜ್ ಇರಲಿಲ್ಲ.

ಇವರ ಡೈರಿಲಿ ಮಾತ್ರ 'ಐಸ್' ಮಾಡೊ ದೊಡ್ಡ ಮಿಷಿನ್ ಇತ್ತು. ನಾವು ಹೋದ್ರೆ ಸ್ವತಃ ಅರಸ್ರೇ ನಮಗೆಲ್ಲಾ ಐಸ್ ಚೂರು ಕೊಡ್ತಿದ್ರು. ಕೆಲವು ಸಲ ತಣ್ಣನೆ ಕೊರೆಯೊ ಹಾಲೂ ಕೊಟ್‌ಬಿಡ್ತಿದ್ರು!... ಆಗ ನಮ್ಮ ಖುಷಿ ನೋಡ್ಬೇಕಿತ್ತು...!'

(ಸಶೇಷ)